ಬರುವಂತಾದ್ದು ಆಗುತ್ತದೆ. ಒಂದು ಅಪರಾಧಿ ಸ್ಥಾನದಲ್ಲಿ ನಿಲ್ಲೋದಕ್ಕೆ ಇವರು ಸಿದ್ಧ ಇದ್ದರೆ ನನ್ನದು ಏನೂ ವಿರೋಧವಿಲ್ಲ. ತಾವು ಪ್ರಶ್ನೋತ್ತರವನ್ನು ಮುಂದುವರಿಸಬಹುದು. ಈ ನೀತಿಯನ್ನು ಪ್ರತಿಭಟನೆ ಮಾಡಿ, ವಿರೋಧ ಪಕ್ಷದವರ ಅಭಿಪ್ರಾಯ ಏನು ಇದೆ, ಇದು ಪ್ರಜಾತಂತ್ರದ ಸತ್ ಸಂಪ್ರದಾಯಕ್ಕೆ ವಿರೋಧವಾಗಿರುವುದನ್ನು ಪ್ರತಿಭಟಿಸಿ ಪ್ರಶ್ನೋತ್ತರ ಅವಧಿಯನ್ನು ಮುಂದುವರಿಸಬಾರದೆಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಯಡಿಯೂರಪ್ಪನವರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ(ಕನಕಪುರ) :- ಮಾನ್ಯ ಅಧ್ಯಕ್ಷರೇ, ತಾವು ವಿರೋಧಪಕ್ಷವನ್ನು ರೆಕಗ್‌ನೈಸ್ ಮಾಡಿ ನಾನು ಉಪನಾಯಕ ಅಂತ ಹೇಳಿ ನನ್ನ ಪಕ್ಷದ ವತಿಯಿಂದ ಸಂಖ್ಯೆಯ ಆಧಾರದ ಮೇಲೆ ನನ್ನನ್ನು ಆಯ್ಕೆ ಮಾಡಿದ್ದೀರಿ. ಮಾನ್ಯ ಯಡಿಯೂರಪ್ಪನವರು ಒಂದು ಆಪಾದನೆ ಮಾಡಿದಾಗ ನಾನು ಸುಮ್ಮನೆ ಇಲ್ಲಿ ಕುಳಿತುಕೊಂಡರೆ ನನ್ನ ಸಮ್ಮತಿ ಇದೆ ಎಂದು ಆಗುತ್ತದೆ. ನಾಳೆ ಮಾಧ್ಯಮದ ಮೂಲಕವಾಗಿ ರಾಜ್ಯದ ಜನತೆಗೆ ವಿಷಯ ಏನೆಂಬುದು ಸರಿಯಾಗಿ ಗೊತ್ತಾಗಬೇಕು. ಸಂಪೂರ್ಣವಾಗಿ ಸಚಿವಸಂಪುಟದ ಮೇಲೆ ಅವಿಶ್ವಾಸ ನಿರ್ಣಯವನ್ನು ಸಂವಿಧಾನಬದ್ಧವಾಗಿ ಮತ್ತು ನಮ್ಮ ಸದನ ರಚನೆ ಮಾಡಿಕೊಂಡಿರುವ ನಿಯಮಗಳ ಪ್ರಕಾರ ನಾವು ಇಲ್ಲಿ ಮಂಡನೆ ಮಾಡಿದ್ದೇವೆ. ನಮ್ಮ ದೌರ್ಭಾಗ್ಯ; ಇವರು ಸಹಿತ ನಾವು ಮಂಡನೆ ಮಾಡಿರತಕ್ಕಂತಹ ಒಂದು ಅವಿಶ್ವಾಸ ನಿರ್ಣಯಕ್ಕೆ ಸಹಿಯನ್ನು ಹಾಕಿದ್ದಾರೆ; ಸಂತೋಷ ಆದರೆ ಈಗ ಎದ್ದು ನಿಂತು ಇದ್ದಕ್ಕಿದ್ದ ಹಾಗೆ ನೀವು ಸರ್ಕಾರದ ಜೊತೆ ಶಾಮೀಲಾಗುತ್ತಾ ಇದ್ದೀರಿ ಎಂದು ಹೇಳಿ ಯುದ್ಧರಂಗದಿಂದ ಹೇಡಿಗಳು ಓಡಿ ಹೋಗುವ ಹಾಗೆ ಓಡಿ ಹೋಗತಕ್ಕ ಕೆಲಸವನ್ನು ಯಡಿಯೂರಪ್ಪನವರು ಮಾಡುತ್ತಿದ್ದಾರೆ. ಕಾಂಗ್ರೆಸ್ ಜೊತೆ ಶಾಮೀಲಾಗತಕ್ಕಂಥ ಪ್ರಶ್ನೆ ಇಲ್ಲಿಲ್ಲ. ದೇಶದ ಐಕ್ಯತೆ ಮತ್ತು ಸಮಗ್ರತೆ ಕಾಪಾಡುವ ದೃಷ್ಟಿಯಿಂದಾಗಿ ಒಂದೇ ಒಂದು ವಿಷಯದಲ್ಲಿ ಸಮಾಜವಾದಿ ತತ್ವಕ್ಕನುಗುಣವಾಗಿರತಕ್ಕಂಥ ವಿಚಾರಗಳನ್ನು ಬಿಟ್ಟರೆ, ಬಾಕಿ ಯಾವುದೇ ದೃಷ್ಟಿಯಲ್ಲೂ ಸಹಿತ ಕಾಂಗ್ರೆಸ್ ಜೊತೆ ಶಾಮೀಲಾಗುವ ಪರಿಸ್ಥಿತಿ ಬರುವುದಿಲ್ಲ. ನಮ್ಮ ನಾಯಕರಾಗಿರುವ ಮಾನ್ಯ ದೇಶಪಾಂಡೆಯವರು ನೆನ್ನೆ ಅತ್ಯಂತ ಕಟುವಾಗಿ ಸರ್ಕಾರವನ್ನು ಮತ್ತು ಈ ಸಭಾನಾಯಕರನ್ನು ಟೀಕೆ ಮಾಡಿದ್ದಾರೆ. ಇಂತಹ ಸಂದರ್ಭದಲ್ಲಿ ಕೇವಲ ರಾಜಕೀಯಕ್ಕೋಸ್ಕರ ಇವರು ಈ ರೀತಿ ಮಾತನಾಡುತ್ತಿದ್ದಾರೆ ಇವರಿಗೆ ಏನೆಂದರೆ ಕಾಂಗ್ರೆಸ್, ಜನತಾದಳ, ಸೆಕ್ಯುಲರ್ ಪಾರ್ಟೀಸ್ ಹೊರಟು ಹೋಗಿ ಬಿಡಬೇಕು. ಇವರು ಏನಾದರೂ ಮಾಡಿ ಗುಮ್ಮನ ಹಾಗೆ ಅಧಿಕಾರಕ್ಕೆ ಬಂದು ಕುಳಿತುಕೊಳ್ಳಬೇಕು ಅದೇ ಇವರಿಗೆ ಬೇಕಾಗಿರುವಂಥದ್ದು, ನಾಳೆ ನಿಮಗೂ ರೈತ ಸಂಘದವರಿಗೂ ಇದೇ ಮಾಡುತ್ತಾರೆ.

ಪ್ರೊ.ಎಂ.ಡಿ. ನಂಜುಂಡಸ್ವಾಮಿ :- ನೀವು ನಮ್ಮನ್ನು ಏತಕ್ಕೆ ಆವರ ಜೊತೆಯಲ್ಲಿ ಸೇರಿಸುತ್ತೀರಿ? ನೀವು ಅವರ ಜೊತೆ ಶಾಮೀಲಾಗಿದ್ದೀರಿ ಎಂದು ಇವರು ಆರೋಪ ಮಾಡಿರಬಹುದು. ನಾನು ನಿಮ್ಮನ್ನು ಕೇಳುತ್ತೇನೆ. ನೀವು ಏಕೆ ಇವರ ಜೊತೆ ಶಾಮೀಲಾಗಿ ಈ ನಿರ್ಣಯ ಮಂಡಿಸಿದಿರಿ ಅಂತ. ಅದಕ್ಕೋಸ್ಕರವೇ ನಾನು ನಿಮ್ಮ ಜೊತೆ ಸೇರದೆ ನಾನು ಪ್ರತ್ಯೇಕವಾಗಿ ನೋಟೀಸ್ ಕಳುಹಿಸಿದ್ದು, ಇವರೂ ಅಪಾಯದವರೇ, ನೀವೂ ಅಪಾಯದವರೇ.

(ಗೊಂದಲ)

ಶ್ರೀ ಪಿ.ಜಿ.ಆರ್ ಸಿಂಧ್ಯ :- ಬಿ.ಜೆ.ಪಿ.ಯವರನ್ನು ಬೆಳೆಸಿದವರೇ ನಾವು; ಈ ಸ್ಥಿತಿಗೆ ಅವರು